ಮಾಡುವ ಆಸೆಯೂ ಇದೆ. ಅತೀ ಶೀಘ್ರದಲ್ಲಿ ಅದರಲ್ಲಿ ತೊಡಗಿಕೊಳ್ಳುತ್ತೇನೆ.

◆ 'ಲವ್ ಯು ರಚ್ಚು' ಸಿನಿಮಾ ಕುರಿತು ಹೇಳಿ.

ನಾನು ಸಿನಿಮಾ ಒಪ್ಪಿಕೊಳ್ಳಬೇಕಾದಾಗ ಒಂದು ಅಂಶವನ್ನು ಗಮನಿಸುತ್ತೇನೆ. ನನ್ನ ಪಾತ್ರ, ಸಿನಿಮಾ ಕೌಟುಂಬಿಕ ಪ್ರೇಕ್ಷಕರಿಗೆ, ಸಾಮಾನ್ಯ ಜನರಿಗೆ ನೈತಿಕವಾಗಿ ಸ್ಫೂರ್ತಿದಾಯಕವಾಗಿರಬೇಕು. ಪ್ರೇಮಿಯಾಗಲಿ, ಮಗನಾಗಲಿ, ಅಣ್ಣ, ತಮ್ಮ ಯಾವುದೇ ರೀತಿಯ ಪಾತ್ರವಾದರೂ ಅದರಲ್ಲಿ ಒಂದು ಮಾರಲ್ ಇರಬೇಕು.

ನಮ್ಮಲ್ಲಿ ಹೀರೊಯಿಕ್ ಸಿನಿಮಾ ಮಾಡುವ ನಟರಿದ್ದಾರೆ. ಅದು ತಪ್ಪೇನಲ್ಲ. ಆದರೆ ಆ ರೀತಿಯ ಅತಿವೈಭವೀಕೃತ ಪಾತ್ರಗಳನ್ನು ನಾನು ಮಾಡಲು ಸಾಧ್ಯವಿಲ್ಲ. ನನಗೆ ಅದು ಹೊಂದುವುದಿಲ್ಲ, ಇಷ್ಟವೂ ಇಲ್ಲ. ಸಿನಿಮಾ ನೋಡುವ ಪ್ರೇಕ್ಷಕರಲ್ಲಿ ಶೇ 90ರಷ್ಟು ಸಾಮಾನ್ಯ ಜನರಿರುತ್ತಾರೆ. ದಿನನಿತ್ಯದ ಜಂಜಡ, ಸಂಸಾರ ತಾಪತ್ರಯ, ಪ್ರೇಮ ವೈಫಲ್ಯ ಹೀಗೆ ಹಲಬಗೆಯಲ್ಲಿ ನೋವನ್ನು ಅನುಭವಿಸುತ್ತಿರುವ ಜನರಿರುತ್ತಾರೆ. ಅವರಿಗೆ ಫ್ಯಾಮಿಲಿ ಮಾರಲ್ ಅನ್ನು ಹೇಳಬೇಕು ಎನ್ನುವುದು ನನ್ನ ಆಸೆ. 'ಕೃಷ್ಣನ್ ಲವ್ ಸ್ಟೋರಿ', 'ಕೃಷ್ಣ ಲೀಲಾ'ದಂಥ ಸಿನಿಮಾಗಳಲ್ಲಿ ಅದಿತ್ತು. 'ಲವ್ ಯೂ ರಚ್ಚು' ಸಿನಿಮಾದಲ್ಲಿಯೂ ಇದನ್ನು ಬೇರೆ ರೀತಿಯಲ್ಲಿ ಹೇಳಲಾಗಿದೆ. ತನ್ನ ಹೆಂಡತಿಯನ್ನು ರಕ್ಷಿಸುವ, ಆ ಮೂಲಕ ತನ್ನ ಕುಟುಂಬವನ್ನು ಕಾಪಾಡಿಕೊಳ್ಳಲು ಹರಸಾಹಸಪಡುವ ಹುಡುಗನ ಪಾತ್ರ ಇಲ್ಲಿದೆ. ಅವನು ಎಲ್ಲವನ್ನೂ ಸಮಚಿತ್ತದಿಂದ, ಸಮಾಧಾನದಿಂದ ನೋಡುತ್ತಾರೆ. ಆ ಗುಣವೇ ನನಗೆ ತುಂಬ ಇಷ್ಟವಾಗಿದ್ದು.

◆ ನಿಮ್ಮ ಪ್ರತಿಭೆಯನ್ನು ಕನ್ನಡ ಚಿತ್ರರಂಗ ಸಮರ್ಪಕವಾಗಿ ಬಳಸಿಕೊಂಡಿದೆಯೇ?

ಇಲ್ಲ. ನನ್ನ ಪ್ರತಿಭೆ ಸರಿಯಾಗಿ ಬಳಕೆಯಾಗಿಲ್ಲ ಎಂಬ ಭಾವನೆ ನನ್ನದು. ಕಲಾವಿದ ಅಂತ ನೋಡಿದರೆ, ನಾನು ನೋಡಲು ಚೆನ್ನಾಗಿದ್ದೀನಿ, ಚೆನ್ನಾಗಿ ಡಾನ್ಸ್ ಮಾಡಬಲ್ಲೆ, ಫೈಟ್ ಮಾಡಬಲ್ಲೆ. ಪರಮಶ್ರೇಷ್ಠ ನಟ ಅಲ್ಲದಿರಬಹುದು; ಆದರೆ ಕೆಟ್ಟ ನಟನೇನೂ ಅಲ್ಲ. ಎಲ್ಲ ರೀತಿಯ ಪಾತ್ರಗಳನ್ನೂ ಸಮರ್ಪಕವಾಗಿ ನಿಭಾಯಿಸಬಲ್ಲೆ. ಆದರೆ ನನ್ನನ್ನು ಎಷ್ಟು ಉಪಯೋಗಿಸಿಕೊಳ್ಳಬಹುದಿತ್ತೋ ಅಷ್ಟು ಉಪಯೋಗಿಸಿಕೊಂಡಿಲ್ಲ. ಅಂಥ ಅವಕಾಶಕ್ಕಾಗಿ ನಾನು ಈಗಲೂ ಕಾಯುತ್ತಿದ್ದೇನೆ. ಹೊಸ ರೀತಿಯ, ಪ್ರಯೋಗಶೀಲ ಸಿನಿಮಾಗಳಲ್ಲಿ ನಟಿಸಲು ಎದುರುನೋಡುತ್ತಿದ್ದೇನೆ. ■





# ಟೈಟಲ್ ಸಸ್ಪೆನ್ಸ್!



ಕವೀಶ್ ಶೆಟ್ಟಿ ಮತ್ತು ಮೇಘಾ ಶೆಟ್ಟಿ ಜೊತೆಯಾಗಿ ನಟಿಸುತ್ತಿರುವ ಸಿನಿಮಾ ಸೆಟ್ಟೇರಿದ ದಿನದಿಂದಲೂ ಮತ್ತೆ ಮತ್ತೆ ಸುದ್ದಿಯಾಗುತ್ತಲೇ ಇದೆ. ಮೊದಲ ಹಂತದ ಚಿತ್ರೀಕರಣ ಮುಗಿದರೂ ಚಿತ್ರತಂಡ ಈ ಚಿತ್ರದ 'ಟೈಟಲ್ ಏನು?' ಎಂಬ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ.

ಚಿತ್ರದ ನಿರ್ದೇಶಕ ಸಡಗರ ರಾಘವೇಂದ್ರ ಅವರಿಗಿದು ಚೊಚ್ಚಲ ನಿರ್ದೇಶನ. ನಿರ್ಮಾಣಹಂತದಿಂದಲೇ ಪ್ರೇಕ್ಷಕರಲ್ಲಿ ಕುತೂಹಲ ಬೆಳೆಸಿಕೊಂಡು ಬರಲು ಅವರು ನಿರ್ಧರಿಸಿದಂತಿದೆ. ಸಿನಿಮಾದ ಒಳಗಿನ ಕಥೆಯಲ್ಲಿ ಸಸ್ಪೆನ್ಸ್ ಅಂಶ ಇದೆಯೋ ಇಲ್ಲವೋ, ಸಿನಿಮಾ ಟೈಟಲ್ ಕುರಿತಾಗಿಯಂತೂ ಸಾಕಷ್ಟು ಸಸ್ಪೆನ್ಸ್ ಬೆಳೆಸಿದ್ದಾರೆ.

ಕನ್ನಡದ ಜೊತೆಗೆ ಮರಾಠಿ, ಹಿಂದಿ, ತೆಲುಗು, ತಮಿಳು ಮತ್ತು ಮಲಯಾಳಂ ಹೀಗೆ ಆರು ಭಾಷೆಯಲ್ಲಿ ತಯಾರಾಗುತ್ತಿರುವ ಚಿತ್ರವಿದು. ಕವೀಶ್ ಶೆಟ್ಟಿ ಈ ಚಿತ್ರಕ್ಕಾಗಿ ಸಾಕಷ್ಟು ಮೈ ದಂಡಿಸಿ ಸಿದ್ಧರಾಗಿದ್ದಾರಂತೆ. ಅವರ ಕಟ್ಟುಮಸ್ತಾದ ಮೈಕಟ್ಟಿಗೆ ಹೂಸ್ಪರ್ಶ ನೀಡಲು ಮೇಘಾ ಶೆಟ್ಟಿ ಸಿದ್ಧರಾಗಿದ್ದಾರೆ. ಬೇರೆ ಭಾಷೆಯ ಹಲವು ಕಲಾವಿದರೂ ಈ ಚಿತ್ರದ ತಾರಾಗಣದಲ್ಲಿದ್ದಾರೆ. ಮರಾಠಿಯ ಬೆಡಗಿ ಶಿವಾನಿ ಸುರ್ವೆ ಮತ್ತು ವಿರಾಟ್ ಮಡ್ಕೆ ಈ ಚಿತ್ರದಲ್ಲಿ ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರುವುದು ಇತ್ತೀಚೆಗೆ ಸುದ್ದಿಯಾಗಿತ್ತು.

ವಿಜಯ್ ಕುಮಾರ್ ಶೆಟ್ಟಿ ಮತ್ತು ರಮೇಶ್ ಕೊಠಾರಿ ಜಂಟಿಯಾಗಿ ನಿರ್ಮಿಸುತ್ತಿರುವ ಈ ಚಿತ್ರದ ಎರಡನೇ ಹಂತದ ಚಿತ್ರೀಕರಣದ ತಯಾರಿ ನಡೆಯುತ್ತಿದೆ. ■